# ನಗರಸಭಾ ಕಾರ್ಯಾಲಯ, ತುಮಕೂರು.

ಫ್ಯಾಕ್ಸ್ : 2275106, ದೂರವಾಣಿ ಸಂಖ್ಯೆ.
ಪೌರಾಯುಕ್ತರ ಕೊಠಡಿ: 2278480,
ಸಾರ್ವಜನಿಕ ದೂರು ವಿಭಾಗ: 2272200, 2271200
ವೆಬ್‌ಸೈಟ್:www.tumkurcity.gov.in

ಸಂಖ್ಯೆ.ನಸತು/ಕಂಶಾ/ಹರಾಜ್ 2/2009-10. ದಿನಾಂಕ:12-01 -2010

## "ಬಹಿರಂಗ ಹರಾಜು ಇಸ್ತಿಹಾರ್"

ಈ ಮೂಲಕ ಸಮಸ್ತ ನಾಗರೀಕರಿಗೆ ತಿಳಿಯಪಡಿಸುವುದೇನೆಂದರೆ, ತುಮಕೂರು ನಗರಸಭೆಯ ಸ್ವಾದೀನದ ಶ್ರೀಸಿದ್ದಿವಿನಾಯಕ ಮಾರುಕಟ್ಟೆ ಆವರಣದಲ್ಲಿ ದಿನಾಂಕ:01-02-2010 ರಿಂದ 31-03-2010 ರವರೆಗೆ ದಿನವಹಿ ಮಾರ್ಕೇಟ್ ಶುಲ್ಕ ವಸೂಲಾತಿ ಹಕ್ಕನ್ನು ದಿನಾಂಕ:18-01-2010 ನೇ ಸೋಮವಾರ ಬೆಳಿಗ್ಗೆ 11-00 ಗಂಟೆಗೆ ಸರಿಯಾಗಿ ನಗರಸಭಾ ಅವರಣದಲ್ಲಿ ಪೌರಾಯುಕ್ತರು ಅಥವಾ ಅವರಿಂದ ಅಧಿಕಾರ ಪಡೆದವರಿಂದ ಬಹಿರಂಗ ಹರಾಜು ಮಾಡಲಾಗುತ್ತದೆ. ಆಸಕ್ತಿ ಉಳ್ಳವರು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಹರಾಜಿನಲ್ಲಿ ಭಾಗವಹಿಸಿ ನಿಗಧಿತ ಶುಲ್ಕ ವಸೂಲಾತಿ ಹಕ್ಕನ್ನು ಪಡೆಯಬಹುದು.

| ಕ್ರ.ಸಂ. | ಬಾಬು ವಿವರ | ಟೆಂಡರ್ ಠೇವಣಿ |
|---|---|---|
| 1 | ಶ್ರೀ ಸಿದ್ದಿವಿನಾಯಕ ತರಕಾರಿ ಮಾರುಕಟ್ಟೆ ಸುಂಕ ವಸೂಲಿ (ಮಂಕರಿ 1ಕ್ಕೆ 1-00ರೂ., ಮೂಟೆ 1ಕ್ಕೆ 2-00 ರೂ.ನಂತೆ) | 10,000.00 |

## ಷರತ್ತುಗಳು

1. ಹರಾಜಿನಲ್ಲಿ ಭಾಗವಹಿಸುವವರು ಪ್ರಾಪ್ತ ವಯಸ್ಕರಾಗಿರಬೇಕು.
2. ನಗರಸಭೆಗೆ ಯಾವುದೇ ತರಹದ ಬಾಕಿದಾರರಾಗಿದ್ದಲ್ಲಿ ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.
3. ಹರಾಜಿನಲ್ಲಿ ಭಾಗವಹಿಸುವವರು ಹರಾಜು ಪ್ರಾರಂಭವಾಗುವ ಮುನ್ನ ನಿಗಧಿಪಡಿಸಿದ ಠೇವಣಿಯನ್ನು ನಗದು ಪಾವತಿಸಿ ಅಥವಾ ಡಿಡಿ ಮುಖಾಂತರ ಪೌರಾಯುಕ್ತರು, ನಗರಸಭೆ, ತುಮಕೂರು ಇವರ ಹೆಸರಿನಲ್ಲಿ ಪಡೆದ ಠೇವಣಿಯನ್ನು ಸಲ್ಲಿಸಿ ಖುದ್ದಾಗಿ ಬಿಡ್ ಸವಾಲು ಮೂಲಕ ಹರಾಜಿನಲ್ಲಿ ಭಾಗವಹಿಸಿ ಹಕ್ಕನ್ನು ಪಡೆದುಕೊಳ್ಳಬೇಕು ಮತ್ತು ಹರಾಜನ್ನು ಬಿಡ್ ಮಾಡುವಾಗ ರೂ.100/- ದರದಲ್ಲಿ ಹೆಚ್ಚು ಬಿಡ್ ಮಾಡಬೇಕು.
4. ಯಶಸ್ವಿ ಬಿಡ್‌ದಾರನ ಠೇವಣಿಯನ್ನು ಬಿಟ್ಟು ಉಳಿದ ಬಿಡ್‌ದಾರರಿಗೆ ಠೇವಣಿಯನ್ನು ಹರಾಜು ಮುಗಿದ ಕೂಡಲೇ ವಾಪಸ್ಸು ಕೊಡಲಾಗುವುದು.
5. ಹರಾಜು ಸಮಯದಲ್ಲಿ ಯಾವುದೇ ಕಾರಣವನ್ನು ಕೊಡದೇ ಹರಾಜನ್ನು ತಿರಸ್ಕರಿಸುವ ಹಾಗೂ ಯಾವುದೇ ಸಂದರ್ಭದಲ್ಲಿ ಯಾವುದೇ ರೀತಿಯ ಷರತ್ತುಗಳನ್ನು ಹೊಸದಾಗಿ ವಿಧಿಸುವ ಅಧಿಕಾರವನ್ನು ಹರಾಜು ಮಾಡುವ ಅಧಿಕಾರಿಗೆ ಇರುವುದು. ಈ ರೀತಿಯಾಗಿ ವಿಧಿಸುವ ಷರತ್ತುಗಳಿಗೆ ಬದ್ಧವಾಗಿರತಕ್ಕದ್ದು.
6. ಯಶಸ್ವಿ ಬಿಡ್‌ದಾರನು ಹರಾಜು ಮುಗಿದ ನಂತರ ಆಖೈರು ಬಿಡ್ ಮೊಬಲಗಿನ ಶೇ.50. ರಷ್ಟು ಮೊತ್ತವನ್ನು ಸ್ಥಳದಲ್ಲಿಯೇ ಪಾವತಿಸುವುದು, ತಪ್ಪಿದಲ್ಲಿ ಆ ದಿನವೇ ಮರು ಹರಾಜನ್ನು ನಡೆಸಲಾಗುವುದು. ಉಳಿದ ಶೇ. 50 ರಷ್ಟು ಮೊತ್ತವನ್ನು 7 ದಿನಗಳೊಳಗಾಗಿ ನಗರಸಭೆಗೆ ಪಾವತಿಸುವುದು. ತಪ್ಪಿದ್ದಲ್ಲಿ ಮರು ಹರಾಜು ಮಾಡಲಾಗುವುದು ಮತ್ತು ಮೊದಲನೇ ಬಿಡ್‌ದಾರನ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಮರು ಹರಾಜಿನಿಂದ ನಗರಸಭೆಗೆ ನಷ್ಟವುಂಟಾದಲ್ಲಿ ಆ ನಷ್ಟವನ್ನು ಮೊದಲನೇ ಬಿಡ್‌ದಾರರಿಂದ ಕಂದಾಯ ವಸೂಲಿ ಮಾಡಲಾಗುವುದು. ಒಂದು ವೇಳೆ ನಗರಸಭೆಗೆ ಲಾಭ ಬಂದಲ್ಲಿ ಲಾಭಾಂಶವನ್ನು ಮೊದಲನೇ ಬಿಡ್‌ದಾರರಿಗೆ ಯಾವುದೇ ಹಕ್ಕು ಇರುವುದಿಲ್ಲ.
7. ಯಶಸ್ವಿ ಬಿಡ್‌ದಾರರು ದಿನಾಂಕ:01-02-2010 ರಿಂದ 31-03-2010 ರವರೆಗೆ ಹರಾಜು ನಿಬಂಧನೆಗಳ ರೀತ್ಯಾ ವಸೂಲು ಮಾಡುವ ಪ್ರತಿ ಟಿಕೇಟ್/ರಸೀತಿಗಳನ್ನು ನಗರಸಭೆಯ ಮೊಹರು ಹಾಕಿಸಿಕೊಂಡು ನಂತರ ವಸೂಲು ಮಾಡುವುದು.
8. ಮೇಲ್ಕಂಡ ಯಾವುದೇ ಷರತ್ತನ್ನು ಉಲ್ಲಂಘನೆ ಮಾಡಿದಲ್ಲಿ ಯಾವುದೇ ಕಾರಣವನ್ನು ನೀಡದೇ ತಾವು ಪಾವತಿ ಮಾಡಿರುವ ಮೊಬಲಗನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಸದರಿ ವಸೂಲಾತಿ ಹಕ್ಕನ್ನು ವರ್ಗಾವಣೆ, ಒಳ ಒಪ್ಪಂದವನ್ನು ನಿಷೇಧಿಸಿದೆ.
9. ನಗರಸಭೆಯ ಅಧಿಕಾರಿಗಳಿಗೆ ಬಾಬಿನ ಶುಲ್ಕ ವಸೂಲಾತಿಯ ಬಗ್ಗೆ ಪರಿಶೀಲಿಸುವ ಹಕ್ಕು ಇರುತ್ತದೆ.
10. ಹರಾಜನ್ನು ಅಂಗೀಕರಿಸುವ/ತಿರಸ್ಕರಿಸುವ, ಮರುಹರಾಜು ಮಾಡುವ ವಿಶಿಷ್ಟ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿಷಯಗಳಿಗೆ ಕಚೇರಿಯ ವೇಳೆಯಲ್ಲಿ ಕಂದಾಯಾಧಿಕಾರಿನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದಾಗಿದೆ. ಅಥವ ನಗರಸಭಾ ವೆಬ್‌ಸೈಟ್:www.tumkurcity.gov.in ವಿಕ್ಷೀಸ ಬಹುದು.

| | | |
|---|---|---|
| ಸಹಿ/ | -ಸಹಿ/- | ಸಹಿ/- |
| (ಎಂ.ಪಿ.ಮಹೇಶ್) | (ಹನುಮಂತರಾಯ) | (ಎನ್.ಆರ್.ಆದರ್ಶಕುಮಾರ್) |
| ಅಧ್ಯಕ್ಷರು | ಉಪಾಧ್ಯಕ್ಷರು | ಪೌರಾಯುಕ್ತರು |
| ನಗರಸಭೆ, ತುಮಕೂರು. | ನಗರಸಭೆ, ತುಮಕೂರು. | ನಗರಸಭೆ, ತುಮಕೂರು. |